ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.
ಸಿ.ಸಿ. ನಂ.: 1332/2022

.........................................................................

CW 18
PW 09

| | | |
|---|---|---|
| ಹೆಸರು | : | ಮೋತಿಲಾಲ್ ಪವಾರ್ |
| ತಂದೆಯ ಹೆಸರು | : | ರಾಮಸ್ವಾಮಿ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಪಿ ಐ, ಹಾವೇರಿ ನಗರ ಪೊಲೀಸ ಠಾಣೆ, |
| ವಾಸಸ್ಥಳ | : | ಹಾವೇರಿ. |

ದಿನಾಂಕ 20-01-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ**: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ದಿನಾಂಕ 11-07-2020 ರಿಂದ 17-01-2022 ರ ವರೆಗೆ ಹಳಿಯಾಳ ವೃತ್ತ ಕಚೇರಿಯಲ್ಲಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 18-12-2021 ರಂದು ಈ ಪ್ರಕರಣದ ಕಡತವನ್ನು ಚಾಸಾ 17 ರವರಿಂದ ಪಡೆದು ಪರಿಶೀಲನೆ ಮಾಡಿ ಅದೇ ದಿನ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಮೃತ ದೇಹದ ಶವ ಪಂಚನಾಮೆಯನ್ನು ಚಾಸಾ 4 ಮತ್ತು 5 ರವರ ಸಮಕ್ಷಮ ಬೆಳಗ್ಗೆ 09-30 ರಿಂದ 11-00 ಗಂಟೆಯ ವರೆಗೆ ಜರುಗಿಸಿರುತ್ತೇನೆ. ಸದರಿ ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಮೇರೆಗೆ ಶವ ಪಂಚನಾಮೆಯನ್ನು **ನಿಪಿ 11 ಎಂದು,** ಸಾಕ್ಷಿಯ ಸಹಿಯನ್ನು **ನಿಪಿ 11 ಎ ಎಂದು** ಗುರುತಿಸಲಾಯಿತು. ಅದೇ ಸಮಯದಲ್ಲಿ ತೆಗೆದ ಭಾವಚಿತ್ರವನ್ನು ತೆಗೆದಿರುತ್ತೇನೆ. ಸಾಕ್ಷಿ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು, ಎರಡು ಭಾವಚಿತ್ರಗಳನ್ನು ಒಟ್ಟಾರೆಯಾಗಿ **ನಿಪಿ 12 ಎಂದು** ಗುರುತಿಸಲಾಯಿತು.

ಅದೇ ದಿನ ಘಟನಾ ಜಾಗದ ಪಂಚನಾಮೆಯನ್ನು ಚಾಸಾ 2 ಮತ್ತು 3 ರವರ ಸಮಕ್ಷಮ ಚಾಸಾ 1 ರವರು ತೋರಿಸಿದ ಜಾಗದಲ್ಲಿ ಸಂಜೆ 04-00 ರಿಂದ 05-00 ಗಂಟೆಯ ವರೆಗೆ ಜರುರಿಸಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ 1 ಬಿ ಎಂದು** ಗುರುತಿಸಲಾಯಿತು. ಅದೇ ಸಮಯದಲ್ಲಿ ಕಚ್ಚಾ ನಕಾಶೆ

ಮತ್ತು ಭಾವಚಿತ್ರಗಳನ್ನು ತೆಗೆಯಲಾಗಿದೆ. ಸಾಕ್ಷಿ ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ನಿಪಿ 2 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು **ನಿಪಿ 2 ಸಿ ಎಂದು** ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಭಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೇ ನಿಪಿ 3 ಎಂದು ಗುರುತಿಸಲಾಗಿದೆ.

ಅದೇ ದಿನ ವಾಹನ ತಡೆ ಪಂಚನಾಮೆಯನ್ನು ಚಾಸಾ 1 ರವರು ತೋರಿಸಿದಂತೆ ಚಾಸಾ 2 ಮತ್ತು 3 ರವರ ಸಮಕ್ಷಮ ಸಂಜೆ 05-10 ರಿಂದ 06-20 ಗಂಟೆಯ ವರೆಗೆ ಜರುರಿಸಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ 4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ 4 ಡಿ ಎಂದು** ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಭಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೇ ನಿಪಿ 5 ಎಂದು ಗುರುತಿಸಲಾಗಿದೆ.

ನಂತರ ಚಾಸಾ 6 ರಿಂದ 10, 11 ರಿಂದ 16 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

ಅದೇ ರೀತಿ ಚಾಸಾ 16 ರವರಿಂದ ಕಲಂ 65 ಬಿ ರಡಿಯಲ್ಲಿ ಪ್ರಮಾಣ ಪತ್ರ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿ ಗುರುತಿಸಿದ ಮೇರೆಗೆ ಪ್ರಮಾಣ ಪತ್ರವನ್ನು **ನಿಪಿ 13 ಎಂದು,** ಸಾಕ್ಷಿಯ ಸಹಿಯನ್ನು **ನಿಪಿ 13 ಎ ಎಂದು** ಗುರುತಿಸಲಾಯಿತು.

ದಿನಾಂಕ 23-12-2021 ರಂದು 133 ರಡಿಯಲ್ಲಿ ವಾಹನದ ಮಾಲೀಕರಿಗೆ ನೊಟೀಸ ನೀಡಿ ವಿವರಣೆಯನ್ನು ಪಡೆದಿರುತ್ತೇನೆ. ಸದರಿ ನೊಟೀಸ್ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ನೊಟೀಸ ಅನ್ನು **ನಿಪಿ 14 ಎಂದು,** ಸಾಕ್ಷಿಯ ಸಹಿಯನ್ನು **ನಿಪಿ 14 ಎ ಎಂದು** ಗುರುತಿಸಲಾಯಿತು. ಮಾಲೀಕರಿಂದ ಪಡೆದ ಉತ್ತರವನ್ನು **ನಿಪಿ 15 ಎಂದು**, ಸಾಕ್ಷಿಯ ಸಹಿಯನ್ನು **ನಿಪಿ15 ಎ ಎಂದು** ಗುರುತಿಸಲಾಯಿತು.

ಆ ಸಮಯದಲ್ಲಿ ವಾಹನದ ಮಾಲೀಕರು ಬಾಂಡ್ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಅದನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು **ನಿಪಿ 16 ಎಂದು**, ಸಾಕ್ಷಿಯ ಸಹಿಯನ್ನು **ನಿಪಿ16 ಎ ಎಂದು** ಗುರುತಿಸಲಾಯಿತು.

ನಂತರ ಈ ಪ್ರಕರಣದ ಆರೋಪಿಯನ್ನು ಕರೆಯಿಸಿ ಕಲಂ 41 ಎ ರಡಿಯಲ್ಲಿ ನೊಟೀಸ್ ನೀಡಿ ದಸ್ತಗೀರ್ ನಿಯಮ ಪಾಲಿಸಿರುತ್ತೇನೆ.

ದಿನಾಂಕ 23-12-2021 ರಂದು ವಾಹನದ ವರದಿಯನ್ನು ಪಡೆದು ಕಡತಕ್ಕೆ ಅಳವಸಿಡಿಕೊಂಡಿರುತ್ತೇನೆ. ಐ ಎಮ್ ವಿ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು **ನಿಪಿ 17 ಎಂದು,** ಸಾಕ್ಷಿಯ ಸಹಿಯನ್ನು **ನಿಪಿ 17 ಎ ಎಂದು** ಗುರುತಿಸಲಾಯಿತು. ಅದೇ ದಿನ ಪಿ ಎಮ್ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಪಿ ಎಮ್ ವರದಿಯನ್ನು

ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು **ನಿಪಿ 18 ಎಂದು** ಸಾಕ್ಷಿಯ ಸಹಿಯನ್ನು **ನಿಪಿ 18 ಎ ಎಂದು** ಗುರುತಿಸಲಾಯಿತು.

ದಿನಾಂಕ 20-12-2021 ರಂದು ಘಟನಾ ಜಾಗದ ಜಂಟಿ ತನಿಖೆಯನ್ನು ನಾನು ಪಿ ಡ್ಯೂ ಡಿ ಇಂಜಿನಿಯರ್ ಮತ್ತು ಆರ್ ಟಿ ಓ ಅಧಿಕಾರಿ ರವರು ಮಾಡಿ ವರದಿ ತಯಾರಿಸಿರುತ್ತೇವೆ. ಸದರಿ ವರದಿಯನ್ನು ಸಾಕ್ಷಿ ಗುರುತಿಸಿದ ಮೇರೆಗೆ ಅದನ್ನು **ನಿಪಿ 19 ಎಂದು,** ಸಾಕ್ಷಿಯ ಸಹಿಯನ್ನು **ನಿಪಿ 19 ಎ ಎಂದು** ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಎರಡು ಭಾವಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅವುಗಳನ್ನು ಒಟ್ಟಾರೆಯಾಗಿ **ನಿಪಿ 20 ಎಂದು** ಗುರುತಿಸಲಾಯಿತು. ನಂತರ ವರದಿ ತಯಾರಿಸಿ Claim Tribunal ಗೆ ಸಲ್ಲಿಸಿರುತ್ತೇನೆ.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆತನು ಈಗ ನ್ಯಾಯಾಲಯದ ಮುಂದೆ ಹಾಜರು ಇರುತ್ತಾನೆ. ಜಪ್ತುಪಡಿಸಿಕೊಂಡ ವಾಹನಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ನಿಪಿ 5 ಎಂದು ಗುರುತಿಸಲಾಗಿದೆ.

ಅದೇ ದಿನ ತನಿಖೆ ಪೂರೈಸಿ ಆರೋಪಿಯ ವಿರುದ್ಧ ಸಾಕಷ್ಟು ಸಾಕ್ಷಾಧಾರಗಳು ಲಭಿಸಿದ್ದರಿಂದ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ನಿವೇದಿಸಿಕೊಂಡಿರುತ್ತೇನೆ.

**ಪಾಟೀ ಸವಾಲುಃ** 2 ನೇ ಆರೋಪಿತನ ಪರ ಶ್ರೀ ಎಸ್ ವಾಯ್ ಜಿ ವಕೀಲರಿಂದ.

ಆರೋಪಿತನ ಯಾವುದೇ ತಪ್ಪು ಇಲ್ಲದಿದ್ದರೂ ಸಹ ಘಟನಾ ಜಾಗದ ಪಂಚನಾಮೆ ಮತ್ತು ಪಿ ಎಮ್ ವರದಿಯನ್ನು, ಘಟನಾ ಜಾಗದ ಕಚ್ಚಾ ನಕಾಶೆ ಮತ್ತು ವಾಹನ ತಡೆ ಪಂಚನಾಮೆಯನ್ನು ಠಾಣೆಯಲ್ಲೆ ತಯಾರಿಸಿರುತ್ತೀರಿ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗುವಂತೆ ಘಟನಾ ಜಾಗದ ಭಾವಚಿತ್ರಗಳನ್ನು ತೆಗೆದಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆಗಳನ್ನು ಪ್ರಕರಣಕ್ಕೆ ಅನುವಾಗುವಂತೆ ದಾಖಲಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಐ ಎಮ್ ವಿ ವರದಿ ಮತ್ತು ಪಿ ಎಮ್ ವರದಿಯನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ತಯಾರಿಸಿರುತ್ತೀರಿ ಎಂದರೆ ಸರಿಯಲ್ಲ. 1 ನೇ ಆರೋಪಿತನ ಯಾವುದೇ ತಪ್ಪು ಇಲ್ಲದಿದ್ದರೂ ಸಹ ಮೃತನ ಕುಟುಂಬಸ್ಥರಿಗೆ ಅನುಕೂಲವಾಗಲು ಸುಳ್ಳು ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 2 ನೇ ಆರೋಪಿತನ ಪರ ಶ್ರೀ ಎಸ್ ವಾಯ್ ಜಿ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ 1 ನೇ ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

2 ನೇ ಆರೋಪಿತನ ಯಾವುದೇ ತಪ್ಪು ಇಲ್ಲದಿದ್ದರೂ ಸಹ ಮೃತನ ಕುಟುಂಬಸ್ಥರಿಗೆ ಅನುಕೂಲವಾಗಲು ಸುಳ್ಳು ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ. ಹಳಿಯಾಳ